

ಸೇರುವುದು ಮಾಮೂಲು ಎನ್ನುವಷ್ಟು ಸಹಜ ಆಗಿದೆ.ಟಿಕ್ ಟಾಕ್ ಸಿಂಗ್‌ನ ಹಾಡಿನಿಂದ ಜನಪ್ರಿಯತೆ ಸಾಧಿಸಿದ್ದ ನಿವೇದಿತಾ ಅವರನ್ನು ಬಿಗ್‌ಬಾಸ್ ಗುರುತಿಸಿದ್ದೇ ಅವರ ಸಾಮಾಜಿಕ ಮಾಧ್ಯಮಗಳ ಜನಪ್ರಿಯತೆಯ ಮಾನದಂಡದಿಂದ. ಕಿರಿಕ್ ಕೀರ್ತಿ ಕೂಡ ಫೇಸ್‌ಬುಕ್ ಅಭಿಯಾನದ ಮೂಲಕವೇ ಜನಮನ್ನಣೆ ಗಳಿಸಿದ್ದರು. ಆ ಮೊದಲು ಸುದ್ದಿ ಮಾಧ್ಯಮದಲ್ಲಿ ನಿರೂಪಕರಾಗಿದ್ದರೂ ಅವರಿಗೆ ಸೆಲೆಬ್ರಿಟಿಯ ವ್ಯಕ್ತಿತ್ವವನ್ನು ತಂದುಕೊಟ್ಟಿದ್ದು ಸೋಷಿಯಲ್ ಮೀಡಿಯಾ. ಅದೇ ಮಾನದಂಡ ಅವರನ್ನು ಬಿಗ್‌ಬಾಸ್ ಮನೆಗೂ ಕರೆತಂತು. ನಂತರ ಅವರಿಗೆ ಹಲವಾರು ಅವಕಾಶಗಳು ಒಂದಾದ ಮೇಲೆ ಒಂದರಂತೆ ಒದಗಿಬಂದವು. ಈಗ ಅವರೇ 'ಕನ್ನಡದ ಕಣ್ಮಣಿ' ಎನ್ನುವ ರಿಯಾಲಿಟಿ ಷೋ ನಿರೂಪಕರಾಗಿದ್ದಾರೆ.

ಹೆಚ್ಚಿನ ಬಜೆಟ್ ಬಯಸುವ ರಿಯಾಲಿಟಿ ಷೋಗಳು ಫಿಕ್ಷನ್‌ನಷ್ಟು ಖಚಿತವಾದ ಮರುಗಳಿಕೆಯ ಭರವಸೆಯನ್ನು ನೀಡುವುದಿಲ್ಲ. ಆ ಹಿಂಜರಿಕೆ ಕೂಡ ಮತ್ತೆ ಹೊಸ ಹೊಸ ಶೋಧಕ್ಕೆ ತನ್ನನ್ನು ಒಡ್ಡಿಕೊಳ್ಳುವಂತೆ ಮಾಡಿದೆ. ರಿಯಾಲಿಟಿ ಷೋಗಳು ಎದುರಿಸುತ್ತಿರುವ ಸಂಕೀರ್ಣ ಸವಾಲುಗಳನ್ನು ನೋಡಿದರೆ,

